# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/19/2015-16 ದಿನಾಂಕ :15/09 / 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಬಸಮ್ಮ ಗಂಡ ಲೇಟ್ ಬಸವನಗೌಡ ಹಾಳೇಕೋಟೆ ಗ್ರಾಮ, ಸಿರುಗುಪ್ಪ ತಾಲ್ಲೂಕು<br><br>(ಶ್ರೀ ಎಚ್.ಎಂ.ಅಂಕ್ಲಾಯ್ಯ ಮತ್ತು ಎ.ಮೋಹನ್ ರೆಡ್ಡಿ, ವಕೀಲರು,ಬಳ್ಳಾರಿ) | 1.ತಹಶೀಲ್ದಾರರು, ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ಸಿರುಗುಪ್ಪ<br>3.ಶ್ರೀಮತಿ ಮುಸಿ ಮುಖಮ್ಮಾ ತಂದೆ ಪಕ್ಕೀರಪ್ಪ ಗಂಡ ತಿಮ್ಮಯ್ಯ, ಹಳೇಕೋಟೆ ಗ್ರಾಮ ಸಿರುಗುಪ್ಪ ತಾಲ್ಲೂಕು. |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ಹಳೇಕೋಟೆ | 359 | 3.42 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.112/2004-05, ದಿನಾಂಕ:08.08.2005 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:21.07.2015, 03.11.2015, 01.12.2015, 08.03.2016, 14.06.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ಹಳೇಕೋಟೆ ಗ್ರಾಮದ ಸ.ನಂ.359 ವಿಸ್ತೀರ್ಣ:3.42 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀಮತಿ ಬಸಮ್ಮ ಗಂಡ ಲೇಟ್ ಬಸವನಗೌಡ ಹಾಗೂ ಶ್ರೀಮತಿ ಮುಸಿ ಮುಖಮ್ಮಾ ತಂದೆ ಪಕ್ಕೀರಪ್ಪ ಗಂಡ ತಿಮ್ಮಯ್ಯ, ಹಳೇಕೋಟೆ ಇವರ ಹೆಸರು ಪಹಣಿ ಕಲಂ 9 ರಲ್ಲಿ ಇಬ್ಬರ ಹೆಸರುಗಳು ಜಂಟಿಯಾಗಿ ನಮೂದಾಗಿರುವುದನ್ನು ಕಡಿಮೆ ಮಾಡಿ ಶ್ರೀಮತಿ ಬಸಮ್ಮ ಗಂಡ ಲೇಟ್ ಬಸವನಗೌಡ ಇವರ ಹೆಸರಿಗೆ ವಿಸ್ತೀರ್ಣ 3.38 ಪಹಣಿಯಲ್ಲಿ ನಮೂದಿಸಿ ಸರಿಪಡಿಸಿಕೊಡಲು ಕೋರಿರುತ್ತಾರೆ.

ಮುಂದುವರೆದು ವಾದಿಗಳು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಮೇಲ್ಮನವಿ ಪರಿಶೀಲಿಸಲಾಗಿ ಸಿರುಗುಪ್ಪ ತಾಲೂಕು ಹಳೇಕೋಟೆ ಗ್ರಾಮದ ಸ.ನಂ.359 ವಿಸ್ತೀರ್ಣ:3.42 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸದರಿ ಪ್ರಕರಣವು ತಿದ್ದುಪಡಿ ವ್ಯಾಪ್ತಿಗೆ ಬರುವುದರಿಂದ ವಾದಿಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ವಾದಿ ಮತ್ತು ಪ್ರತಿವಾದಿಯಗಳ ಹೆಸರು ಜಂಟಿ ನಮೂದನ್ನು ಕಡಿಮೆ ಮಾಡುವ ಕುರಿತಾಗಿ ನಿಯಾಮಾನುಸಾರ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 07ದಿನದೊಳಗೆ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಲು ಈ ಕೆಳಕಂಡ ಆದೇಶ

:: **ಆದೇಶ** ::

**ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ,**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ಹಳೇಕೋಟೆ ಗ್ರಾಮದ ಸ.ನಂ.359 ವಿಸ್ತೀರ್ಣ 3.42, ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿ ಪ್ರಸ್ತಾವನೆಯನ್ನು ಈ ಆದೇಶ ತಲುಪಿದ 07 ದಿನದೊಳಗೆ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿದೆ.

ಈ ಆದೇಶವನ್ನು ಹೇಳಿ,ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ:15.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

**ಸಹಾಯಕ ಆಯುಕ್ತರು,**

**ಬಳ್ಳಾರಿ**